**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಸಿ.ಸಿ. ಸಂಖ್ಯೆ. 1197/2019**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

- ವಿರುದ್ಧ -

**ಆರೋಪಿಗಳುಃ**

1) ಶ್ರೀ.ನವೀನ ಬಿನ್ ಲೇಟ್ ಮರಿಕಾಳಯ್ಯ
ವಯಸ್ಸು ಸುಮಾರು 27 ವರ್ಷ,

2) ಶ್ರೀ.ಬೀರ ಬಿನ್ ಲೇಟ್ ಕಾಡಯ್ಯ
ವಯಸ್ಸು ಸುಮಾರು 45 ವರ್ಷ,

3) ಶ್ರೀ.ಕಾಡಯ್ಯ ಬಿನ್ ಲೇಟ್ ಸುಬ್ಬಯ್ಯ
ವಯಸ್ಸು ಸುಮಾರು 65 ವರ್ಷ,
ಎಲ್ಲರ ವಾಸಃ ಹುರ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ-1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ?

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-2.** ಫ್ರಾಸಾ-1 ಶ್ರೀಮತಿ.ಸಿದ್ದಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 3 ವರ್ಷಗಳ ಹಿಂದೆ (ಸಾಕ್ಷ್ಯ ನುಡಿದ ದಿನಾಂಕ 19.03.2025) ಹುರಾ ಗ್ರಾಮದಲ್ಲಿರುವ ತಮ್ಮ ಜಮೀನಿನಲ್ಲಿ ಸಂಜೆ 07.00 ಗಂಟೆ ಸಮಯದಲ್ಲಿ ತಾನು ಮತ್ತು ತನ್ನ ಗಂಡ ಕೆಲಸ ಮಾಡುತ್ತಿರುವಾಗ 1 ನೇ ಆರೋಪಿ ಬಂದು ಹೊಲ ನಿಮಪ್ಪನದಾ ಎಂದು ಬಾಯಿಗೆ ಬಂದಂತೆ ಬೈದಿರುತ್ತಾರೆ. ಆಗ ತನ್ನ ಗಂಡ ಗ್ರಾಮಕ್ಕೆ ಜನರನ್ನು ಕರೆದುಕೊಂಡು ಬರಲು ಹೋದಾಗ 1 ನೇ ಆರೋಪಿ ತನಗೆ

ಕಲ್ಲಿನಿಂದ ಹೊಡೆದಿರುತ್ತಾರೆ. 1 ನೇ ಆರೋಪಿ ತನ್ನ ಗಂಡನಿಗೂ ಕೂಡ ಹೊಡೆದಿರುತ್ತಾರೆ. ಆಗ ಮಲ್ಕುಂಡಿ ಗ್ರಾಮದ ಬಸವರವರು ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ತಾನು ಠಾಣೆಗೆ ಹೋಗಿ ನಿಶಾನೆ ಪಿ-1 ರಂತೆ ದೂರು ಬರೆಸಿರುತ್ತೇನೆ. ತಾನು ದೂರು ಕೊಟ್ಟ ನಂತರ ಪೊಲೀಸರು ತಮ್ಮ ಜಮೀನಿನ ಹತ್ತಿರ ಬಂದು ನಿಶಾನೆ ಪಿ-2 ರಂತೆ ಮಹಜರ್ ಮಾಡಿರುತ್ತಾರೆ. ಸ್ಥಳವನ್ನು ತಾನೇ ತೋರಿಸಿರುತ್ತೇನೆ. ಆ ಸಂದರ್ಭ ದಲ್ಲಿ ಬಸವ ಮತ್ತು ಮಂಜು ಎಂಬುವವರು ಇದ್ದರು ಹಾಗು ಭಾವಚಿತ್ರ ಮಾತ್ರ ತೆಗೆಸಿರುತ್ತಾರೆ. ಮಹಜರ್ ಸಮಯದಲ್ಲಿ ಪೊಲೀಸರು ಮರು ಹೇಳಿಕೆ ಪಡೆದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-3.** ಫ್ರಾಸಾ-1 ಶ್ರೀಮತಿ.ಸಿದ್ದಮ್ಮ, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 25.04.2019 ರಂದು ಸಂಜೆ 7.00 ಗಂಟೆ ಸಮಯದಲ್ಲಿ ತಾನು ಮತ್ತು ತನ್ನ ಗಂಡ ಸರ್ವೆ ನಂಬರ್ 92/1 ರಲ್ಲಿ ಕೆಲಸ ಮಾಡುವಾಗ 1 ಮತ್ತು 2 ನೇ ಆರೋಪಿಗಳು ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ಆರೋಪಿಗಳು ತನ್ನ ಗಂಡನನ್ನು ಉದ್ದೇಶಿಸಿ "ಬೋಳಿಮಗನೆ, ಸೂಳೆಮಗನೆ" ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ತಾನು ಏಕೆ ಗಲಾಟೆ ಮಾಡುತ್ತೀರಾ ಎಂದು ಕೇಳಿದಾಗ 2 ನೇ ಆರೋಪಿ ತನಗೆ ಲೋಫರ್ ಮುಂಡೆ ಎಂದು ಬೈದಿರುತ್ತಾರೆ. ಆಗ ತನ್ನ ಗಂಡ ಚಂದ್ರಶೇಖರ್ ರವರನ್ನು ಕರೆದುಕೊಂಡು ಬರುವುದಾಗಿ ಊರಿಗೆ ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-4.** ಫ್ರಾಸಾ-1 ಶ್ರೀಮತಿ.ಸಿದ್ದಮ್ಮ, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ 2 ನೇ ಆರೋಪಿ ಕೈಯಿಂದ ತನ್ನ ತಲೆಗೆ ಹೊಡೆದು ಈ ಜಮೀನನ್ನು ಬಿಟ್ಟು ಹೋಗು ಎಂದು ಹೇಳಿರುತ್ತಾರೆ. 1 ನೇ ಆರೋಪಿ ದೊಣ್ಣೆಯಿಂದ ತನ್ನ ಎಡಗೈನ ಮುಂಗೈಗೆ ಹೊಡೆದಿರುತ್ತಾರೆ. 3 ನೇ ಆರೋಪಿ ಇವರಿಗೆ ಹೊಡೆಯಿರಿ ಎಂದು 1 ನೇ ಮತ್ತು 2 ನೇ ಆರೋಪಿಗಳಿಗೆ ಕುಮಕ್ಕು ನೀಡಿರುತ್ತಾರೆ. ಆ ಸಂದರ್ಭದಲ್ಲಿ ತನ್ನ ಗಂಡ ಮತ್ತು ಚಾಸಾ-3 ರವರು ಗಲಾಟೆ ಬಿಡಿಸಿರುತ್ತಾರೆ. ಆರೋಪಿಗಳು ತನಗು ಮತ್ತು ಚಾಸಾ-2 ರವರಿಗು ಕೊಲೆ ಮಾಡುವುದಾಗಿ ಜೀವಬೆದರಿಕೆ ಹಾಕಿರುತ್ತಾರೆ. ಆಗ ಚಾಸಾ-6 ತನ್ನನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು

ಹೋಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿರುವಾಗ ಪೊಲೀಸರು ತನ್ನ ಹೇಳಿಕೆ ದೂರು ಪಡೆದಿರುತ್ತಾರೆ. ಚಾಸಾ-4 ಮತ್ತು ಚಾಸಾ-5 ರವರು ಮಹಜರ್ ಸಮಯದಲ್ಲಿ ಇದ್ದರು. ಮಹಜರ್ ಸಮಯದಲ್ಲಿ ಪೊಲೀಸರು ಮುದ್ದೆ ಮಾಲು-1 ದೊಣ್ಣೆಯನ್ನು ಅಮಾನತ್ ಪಡಿಸಿಕೊಂಡಿರುತ್ತಾರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-5.** ಫ್ರಾಸಾ-3 ಶ್ರೀ.ಶ್ರೀನಿವಾಸ, ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಗಳು ಸರ್ವೆ ನಂ.92/1 ರ ಜಮೀನಿನ ವಿಚಾರವಾಗಿ ಚಾಸಾ-1 ಮತ್ತು ಚಾಸಾ-2 ರವರ ಜೊತೆ ಗಲಾಟೆ ಮಾಡಿ ಹಲ್ಲೆ ಮಾಡಿದ ವಿಚಾರವಾಗಿ ಚಾಸಾ-1 ರವರು ದೂರು ನೀಡಿದ್ದು, ಪೊಲೀಸರು ದಿನಾಂಕ 05.05.2019 ರಂದು ಗಲಾಟೆ ನಡೆದ ಸ್ಥಳವಾದ ಹುರಾ ಎಲ್ಲೆಗೆ ಸೇರಿದ ಸರ್ವೆ ನಂ.92/1 ರ ಜಮೀನಿನಲ್ಲಿ ಚಾಸಾ-1 ರವರು ತೋರಿಸಿಕೊಟ್ಟಂತೆ ತನ್ನ ಮತ್ತು ಚಾಸಾ-5 ರವರ ಪಂಚರ ಸಮಕ್ಷಮ ನಿಶಾನೆ ಪಿ-2 ರಂತೆ ಮಹಜರ್ ಮಾಡಿ ಮುದ್ದೆ ಮಾಲು-1 ದೊಣ್ಣೆಯನ್ನು ಅಮಾನತ್‌ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ತಾನು ಮತ್ತು ಚಾಸಾ-6 ಮಾತ್ರ ಇದ್ದೆವು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-6.** ಫ್ರಾಸಾ-4 ಶ್ರೀ.ಬಸವಣ್ಣ, ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಗಳು ಸರ್ವೆ ನಂ.92/1 ರ ಜಮೀನಿನ ವಿಚಾರವಾಗಿ ಚಾಸಾ-1 ಮತ್ತು ಚಾಸಾ-2 ರವರ ಜೊತೆ ಗಲಾಟೆ ಮಾಡಿ ಹಲ್ಲೆ ಮಾಡಿದ ವಿಚಾರವಾಗಿ ಚಾಸಾ-1 ರವರು ದೂರು ನೀಡಿದ್ದು, ಪೊಲೀಸರು ದಿನಾಂಕ 05.05.2019 ರಂದು ಗಲಾಟೆ ನಡೆದ ಸ್ಥಳವಾದ ಹುರಾ ಎಲ್ಲೆಗೆ ಸೇರಿದ ಸರ್ವೆ ನಂ. 92/1 ರ ಜಮೀನಿನಲ್ಲಿ ಚಾಸಾ-1 ರವರು ತೋರಿಸಿಕೊಟ್ಟಂತೆ ತನ್ನ ಮತ್ತು ಚಾಸಾ-4 ರವರ ಪಂಚರ ಸಮಕ್ಷಮ ಮಹಜರ್ ಮಾಡಿ, ಸ್ಥಳದಲ್ಲಿ ಹಾಜರುಪಡಿಸಿದ ಮುದ್ದೆ ಮಾಲು-1 ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ತಾನು ಮತ್ತು ಚಾಸಾ-6 ಮಾತ್ರ ಇದ್ದೆವು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-7.** ಫ್ರಾಸಾ-5 ಶ್ರೀ.ಚಂದ್ರಶೇಖರ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.04.2019 ರಂದು ತಾನು ಮನೆಯಲ್ಲಿರುವಾಗ ಸುಮಾರು 6.00-6.30 ಗಂಟೆ ಸಮಯದಲ್ಲಿ ತನ್ನ ತಂದೆ ಮನೆಗೆ ಬಂದು ಚಾಸಾ-2 ರವರಿಗೆ ಹೊಡೆದಿರುತ್ತಾರೆ, ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ಹೇಳಿದ್ದರಿಂದ ತಾನು ತನ್ನ ತಂದೆ-ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಏಕೆ ಹಲ್ಲೆ ಮಾಡಿರುತ್ತಾರೆಂದು ತನ್ನ ತಾಯಿಯನ್ನು ಕೇಳಿದಾಗ ತಮ್ಮ ಜಮೀನಿನಲ್ಲಿ ಕಾಳು ಬಿತ್ತನೆಗೆ ಹೋದಾಗ ಆರೋಪಿಗಳು ತಮ್ಮ ಜಮೀನಿಗೆ ಬಂದು ತನ್ನ ತಾಯಿಗೆ "ಬೋಳಿಮಗಳೆ ಜಮೀನಿಂದ ಈಚೆಗೆ ಬಾ" ಎಂದು ಬೈದು, ದೊಣ್ಣೆಯಿಂದ ಕೈಗೆ ಹೊಡೆದಿರುತ್ತಾರೆಂದು. ತಾವು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಬಂದು ತಮ್ಮ ಹೇಳಿಕೆ ಪಡೆದಿರುತ್ತಾರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-8.** ಫ್ರಾಸಾ-6 ಡಾ.ಹರಿಪ್ರಸಾದ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.04.2019 ರಂದು ತಾನು ಆಸ್ಪತ್ರೆಯಲ್ಲಿರುವಾಗ ಚಾಸಾ-1 ರವರು ಫ್ರಾಸಾ-5 ರವರ ಜೊತೆ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಚಾಸಾ-1 ರವರನ್ನು ಪರೀಕ್ಷೆ ಮಾಡಿ ನೋಡಲಾಗಿ, ತಲೆಯ ಮುಂಭಾಗದಲ್ಲಿ ಮತ್ತು ಎಡಗೈಯಲ್ಲಿ ನೋವು ಮತ್ತು ಮುಟ್ಟಿದಾಗ ನೋವು ಇತ್ತು. (Pain and tenderness over left forearm and head). ಈ ಮೇಲ್ಕಂಡ ಗಾಯಗಳು ತನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಈ ಬಗ್ಗೆ ನಿಶಾನೆ-ಪಿ 4 ರಂತೆ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಈ ಮೇಲೆ ಹೇಳಿರುವ ಗಾಯಗಳು ದೊಣ್ಣೆಯಿಂದ ಹಲ್ಲೆ ಮಾಡಿದರೆ ಉಂಟಾಗುವ ಸಂಭವವಿರುತ್ತದೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-9.** ಫ್ರಾಸಾ-7 ಶ್ರೀ.ಶಿವರಾಜು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 27.04.2019 ರಂದು ತಾನು ಠಾಣೆಯಲ್ಲಿರುವಾಗ ಚಾಸಾ-1 ರವರು ಹಲ್ಲೆಗೊಳಗಾಗಿ ಚಿಕಿತ್ಸೆಗೆ ದಾಖಲಾಗಿರುತ್ತಾರೆ ಎಂದು ಆಸ್ಪತ್ರೆಯಿಂದ ಬಂದ ಸೂಚನಾಪತ್ರದ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ ನಿಶಾನೆ ಪಿ- 1

ರಂತೆ ಚಾಸಾ-1 ರವರ ಹೇಳಿಕೆ ದೂರು ಪಡೆದು ನಿಶಾನೆ ಪಿ-5 ರಂತೆ ಪ್ರಥಮ ವರ್ತಮಾನ ವರದಿ ದಾಖಲಿಸಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-10.** ಫ್ರಾಸಾ-7 ಶ್ರೀ.ಶಿವರಾಜು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 15.05.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ನಿಶಾನೆ ಪಿ-2 ರಂತೆ ಪಂಚರ ಸಮಕ್ಷಮ ಮಹಜರ್ ಮಾಡಿ ಮುದ್ದೆ ಮಾಲು-1 ದೊಣ್ಣೆ ವಶಪಡಿಸಿಕೊಂಡಿರುತ್ತೇನೆ. ತನಿಖೆ ಮುಂದುವರಿಸಿ ಚಾಸಾ-1 ರವರ ಮರು ಹೇಳಿಕೆ, ಚಾಸಾ-2, ಚಾಸಾ-3 ಮತ್ತು ಚಾಸಾ-6 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 28.05.2019 ರಂದು ನಿಶಾನೆ ಪಿ-4 ರಂತೆ ಗಾಯದ ಪ್ರಮಾಣಪತ್ರ ಪಡೆದಿರುತ್ತೇನೆ. ನಿಶಾನೆ ಪಿ-6 ರಂತೆ ಸರ್ವೆ ನಂ.92/1 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆ ಪಡೆದಿರುತ್ತೇನೆ. ನಂತರ ಆರೋಪಿಗಳ ವಿರುದ್ಧ ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-11.** ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

1 **ರಿಂದ** 3 **ನೇ ಆರೋಪಿಗಳ ಉತ್ತರಃ**

**ಪ್ರಶ್ನೆ-12.** ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

1 **ರಿಂದ** 3 **ನೇ ಆರೋಪಿಗಳ ಉತ್ತರಃ**

(ಮೇಲಿನ ಹೇಳಿಕೆಗಳನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಕನ್ನಡದಲ್ಲಿ ಓದಿ ಹೇಳಿ ನಂತರ ಆರೋಪಿಗಳು ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸುತ್ತೇನೆ.)

**ದಿನಾಂಕಃ** 10.06.2026

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.**